# ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:-** ಶ್ರೀ ದಿಲೀಪ್ ಬಸವಣ್ಣಪ್ಪ ಹುಗ್ಗಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಕುರಿತು.

ಓದಲಾಗಿದೆ:- ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿಕ್ಕಮಗಳೂರು ಇವರ ಪತ್ರ ಸಂಖ್ಯೆ: ಜಿಪಂಚಿ/ಆ-2/ಸಿಆರ್11/2015-16. ದಿನಾಂಕ:16-11-2015.

*****

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ: 16-11-2015ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿಕ್ಕಮಗಳೂರು. ರವರು ಶ್ರೀ ದಿಲೀಪ್ ಬಸವಣ್ಣಪ್ಪ ಹುಗ್ಗಿ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಶೃಂಗೇರಿ, ಇವರು ವೈಯಕ್ತಿಕ ಕಾರಣಗಳಿಗಾಗಿ ದಿನಾಂಕ: 03-10-2015 ರಿಂದ 31-12-2015 ರವರೆಗೆ ಪರಿವರ್ತಿತ ರಜೆ ಕುರಿತಾದ ಕೋರಿಕೆ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯ ಪತ್ರವು ದಿನಾಂಕ: 7-10-2015 ರಂದು ತಮ್ಮ ಕಛೇರಿ ತಲುಪಿರುವುದಾಗಿಯೂ, ಈ ಕುರಿತು ಸದರಿ ಅಧಿಕಾರಿಯ ಜೊತೆ ದಿನಾಂಕ: 8-10-2015 ರಂದು ಮು.ಕಾ.ನಿ.ಅ. ರವರು ಚರ್ಚಿಸಿದ್ದು, ಅನಾರೋಗ್ಯ ನಿಮಿತ್ತ ನಿತ್ರಾಣಗೊಂಡು ಕಛೇರಿ ಕೆಲಸ ನಿರ್ವಹಿಸಲು ಸಾಧ್ಯವಾಗದ ಕಾರಣ ಹಾಗೂ ವಯಸ್ಸಾದ ತಾಯಿಯ ಯೋಗಕ್ಷೇಮದ ಸಲುವಾಗಿ ಮತ್ತು ಇವರ ಸೊಸೆಯ ಮೆದುಳು ನರ ದೋಷದ ತೊಂದರೆಯ ಕಾರಣಗಳಿಂದ ಕಾರ್ಯನಿರ್ವಾಹಕ ಅಧಿಕಾರಿಯ ಹುದ್ದೆಯ ಕರ್ತವ್ಯ ನಿರ್ವಹಿಸಲು ಸಾಧ್ಯವಾಗದೇ ಮಾನಸಿಕ ಅಸ್ವಸ್ಥಗೊಂಡಿರುತ್ತಾರೆಂದು ತಿಳಿಸಿರುತ್ತಾರೆಂದು ದೀರ್ಘಕಾಲಿಕ ರಜೆ ಹೋಗುವ ಮುನ್ನ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ತಾವು ಹೊಂದಿದ ಹುದ್ದೆಯ ಪ್ರಭಾರ ಬೇರೆಯವರಿಗೆ ವಹಿಸದೇ ಕೇಂದ್ರ ಸ್ಥಾನ ಬಿಟ್ಟು ತೆರಳಿರುವುದರಿಂದ, ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಕೋರಿರುತ್ತಾರೆ.

ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿಕ್ಕಮಗಳೂರು ರವರು ತಮ್ಮ ಪತ್ರದ ಜೊತೆ ಈ ಕುರಿತಾಗಿ ಸರ್ಕಾರಕ್ಕೆ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಶ್ರೀ ದಿಲೀಪ್ ಬಸವಣ್ಣಪ್ಪ ಹುಗ್ಗಿ ರವರು ಅರಳುಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆ ಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುವುದು ಕಂಡು ಬರುತ್ತದೆ. ದಿನಾಂಕ:3-10-2015 ರಿಂದ ದಿನಾಂಕ:2-12-2015 ರವರೆಗೆ ವಿಶ್ರಾಂತಿ ಪಡೆಯಲು ವೈದ್ಯರು ಶಿಫಾರಸ್ಸು ಮಾಡಿರುವುದು ಕಂಡು ಬರುತ್ತದೆ.

ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯು ಪ್ರಮುಖ ಜವಾಬ್ದಾರಿಗಳನ್ನು ಹೊಂದಿರುವ ಹುದ್ದೆಯಾಗಿದ್ದು, ಸದರಿ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಶ್ರೀ ದಿಲೀಪ್ ಬಸವಣ್ಣಪ್ಪ ಹುಗ್ಗಿ ಇವರು ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿಕ್ಕಮಗಳೂರು ರವರ ಪೂರ್ವಾನುಮತಿ ಪಡೆಯದೇ ತಾವು ಹೊಂದಿರುವ ಹುದ್ದೆಯ ಪ್ರಭಾರವನ್ನು ಬೇರೊಬ್ಬ ಅಧಿಕಾರಿಗೆ ಹಸ್ತಾಂತರಿಸದೇ ರಜಾ ಪತ್ರವನ್ನು ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿಕ್ಕಮಗಳೂರು ರವರಿಗೆ ಕಳುಹಿಸುವ ಮೂಲಕ ದೀರ್ಘಕಾಲಿಕ ರಜೆ ಮೇಲೆ ತೆರಳಿರುವುದು ತೀವ್ರ ಸ್ವರೂಪದ ದುರ್ನಡತೆಯಾಗಿದ್ದು, ಸದರಿ ಅಧಿಕಾರಿಯು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ಅವರು ಹೊರರೋಗಿಯಾಗಿ ದಿನಾಂಕ: 6-10-2015 ರಂದು ಚಿಕಿತ್ಸೆ ಪಡೆದಿರುವುದು ವೇದ್ಯವಾಗಿದೆ. ಆದರೆ ಸದರಿಯವರ ವಿರುದ್ಧ ಚಿಕಿತ್ಸೆ ಪಡೆದ

ಪೂರ್ವದಲ್ಲಿ ದಿನಾಂಕ:3-10-2015 ರಿಂದ ಪೂರ್ವಾನುಮತಿ ಪಡೆಯದೇ ವೈಯಕ್ತಿಕ ಕಾರಣಗಳಿಗಾಗಿ ರಜೆ ಮೇಲೆ ತೆರಳಿದ್ದು, ಎರಡೂವರೆ ತಿಂಗಳ ನಂತರವೂ ಸಹ ಕಛೇರಿಗೆ ಹಾಜರಾಗದೇ ನಿರ್ಲಕ್ಷ್ಯ ತೋರಿರುವುದನ್ನು ಗಮನಿಸಿದಲ್ಲಿ, ಅವರು ತಮ್ಮ ಹುದ್ದೆಯ ಕರ್ತವ್ಯದಲ್ಲಿ ತೀವ್ರ ತರಹದ ನಿರ್ಲಕ್ಷ ಭಾವ ತೋರಿಸಿರುವುದು ವ್ಯಕ್ತವಾಗುತ್ತದೆ. ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿರವರ ವ್ಯಾಪ್ತಿಯಲ್ಲಿ ಹಲವಾರು ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಕುರಿತು ಪರಿಶೀಲನೆ ನಡೆಸಬೇಕಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ತೀವ್ರ ಬರಗಾಲ ಪರಿಸ್ಥಿತಿ ಎದುರಾಗಿದ್ದು, ಗ್ರಾಮೀಣ ಭಾಗಗಳ ಜನರಿಗೆ ಕುಡಿಯುವ ನೀರಿನ ಸೌಕರ್ಯಗಳನ್ನು ಮತ್ತು ಉದ್ಯೋಗಗಳನ್ನು ಸೃಷ್ಟಿಸುವ ಕಾರ್ಯದಲ್ಲಿ ಪ್ರಮುಖ ಪಾತ್ರವನ್ನು ವಹಿಸಬೇಕಾಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸದರಿ ಅಧಿಕಾರಿಯು ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ದೀರ್ಘಕಾಲಿಕ ರಜೆಯ ಮೇಲೆ ತೆರಳುವ ಮೂಲಕ ತೀವ್ರತರವಾದ ದುರ್ನಡತೆ ಎಸಗಿದ್ದಾರೆ. ಈಗಾಗಲೇ 2015-16ನೇ ಸಾಲಿನ ಅಂತಿಮ ಸಾಲಿನಲ್ಲಿದ್ದು, ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸುವ ಮೇಲುಸ್ತುವಾರಿ ಜವಾಬ್ದಾರಿಯು ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಅವರು ದೀರ್ಘಾವಧಿ ರಜೆಯ ಮೇಲೆ ಅನಧಿಕೃತವಾಗಿ ತೆರಳಿರುವುದು ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದಲ್ಲಿ ವ್ಯತ್ಯಯವಾಗಿ, ಗ್ರಾಮೀಣ ಪ್ರದೇಶದ ಜನರಿಗೆ ಮೂಲ ಸೌಕರ್ಯ ಒದಗಿಸುವಲ್ಲಿ ವಿಫಲರಾಗುವ ಸಾಧ್ಯತೆ ಇರುತ್ತದೆ.

ಆದ್ದರಿಂದ, ಶ್ರೀ ದಿಲೀಪ್ ಬಸವಣ್ಣಪ್ಪ ಹುಗ್ಗಿ ಇವರು ಅನಧಿಕೃತವಾಗಿ ದೀರ್ಘಾವಧಿ ರಜೆಯ ಮೇಲೆ ತೆರಳಿರುವ ಹಿನ್ನಲೆಯಲ್ಲಿ, ಸದರಿ ದುರ್ನಡತೆಗೆ ಸಂಬಂಧಿಸಿದಂತೆ, ಸದರಿಯವರ ವಿರುದ್ಧದ ಇಲಾಖಾ ವಿಚಾರಣೆ ಬಾಕಿ ಇರಿಸಿ, ತಕ್ಷಣ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಪಡಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 251 ವಿಸೇಬಿ 2015. ಬೆಂಗಳೂರು ದಿನಾಂಕ:18-01-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ದಿಲೀಪ್ ಬಸವಣ್ಣಪ್ಪ ಹುಗ್ಗಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ, ಇವರನ್ನು ಕರ್ನಾಟ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1)(ಡಿ) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯವರು ನಿಯಮಾನುಸಾರ ಜೀವನಾಧಾರ ಭತ್ಯೆ ಪಡೆಯಲು ಅರ್ಹರಿದ್ದಾರೆ. ಮುಂದುವರೆದು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಕೇಂದ್ರಸ್ಥಾನ ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

T. Manj 18.1.16
(ಟಿ ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿಕ್ಕಮಗಳೂರು.
3. ಸಂಬಂಧಿಸಿದ ಅಧಿಕಾರಿಗೆ.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶೀ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ ಉಪ ಕಾರ್ಯದರ್ಶಿ(ಆಡಳಿತ) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3. ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.